## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1527/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ನವೀನ್ | CW: 3 | PW: 3 |
| ತಂದೆಯ ಹೆಸರು | : | ಜಯಪ್ಪ. ಜಿ | | |
| ವಯಸ್ಸು | : | 31 | | |
| ವೃತ್ತಿ | : | ಖಾಸಗಿ ಕೆಲಸ | | |
| ವಾಸಸ್ಥಳ | : | ಸುರಹೊನ್ನೆ | | |

ದಿನಾಂಕಃ 20.03.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 1 ನನ್ನ ತಮ್ಮ. ಚಾಸಾ 2 ನನ್ನ ತಾಯಿ. ಚಾಸಾ 4 ರಿಂದ 6 ರವರು ಗೊತ್ತು. 2020 ರ ಏಪ್ರಿಲ್ 9 ನೇ ತಾರೀಖಿನಂದು ಸಂಜೆ 7.30 ಗಂಟೆ ಸಮಯದಲ್ಲಿ, ಚಾಸಾ 6 ರವರು ಅವರ ಹಿತ್ತಲ ಜಾಗದಲ್ಲಿ ಮೆಕ್ಕೆಜೋಳ ಹಾಕಿದ್ದು, ಸದರಿ ಜಾಗದಲ್ಲಿ ಹಿಂದಿನ ವರ್ಷ ನಾವು ಮೆಕ್ಕೆಜೋಳ ಹಾಕಿದ್ದು ಈ ವರ್ಷ ಯಾರೂ ಸಹ ಮೆಕ್ಕೆಜೋಳ ಹಾಕಬಾರದು ಎಂದು ಗ್ರಾಮಸ್ಥರು ಹೇಳಿದ್ದರಿಂದ ನಾವು ಸದರಿ ಜಾಗದಲ್ಲಿ ಮೆಕ್ಕೆಜೋಳ ಹಾಕಿಲ್ಲ ನೀವು ಯಾಕೆ ಹಾಕಿದ್ದು ಎಂದು ನಾನು ಮತ್ತು ಚಾಸಾ 1 ರವರು ಚಾಸಾ 6 ರವರನ್ನು ಕೇಳಿದಾಗ ಸುಂಕು ಬರುತ್ತದೆ ಎಂದು ಅನಿಸಿದರೆ ಮನೆಗೆ ಟಾರ್ಪಲ್ ಕಟ್ಟಿಕೊಳ್ಳಿ ಎಂದು ಹೇಳಿದರು. ಆಗ ಆರೋಪಿಗಳು ಅಲ್ಲೇ ಇದ್ದರು. ಆಗ ಚಾಸಾ 1 ರವರು ನಾವು ಹಾಕಿದರೆ ಸುಂಕು ಬರುತ್ತದೆ ಚಾಸಾ 6 ರವರು ಹಾಕಿದರೆ ಸುಂಕು ಬರುವುದಿಲ್ಲವಾ ಎಂದು ಆರೋಪಿಗಳನ್ನು ಕೇಳಿದಾಗ 2 ನೇ ಆರೋಪಿಯು ಏಕಾಏಕಿ ಅವಾಚ್ಯ ಶಬ್ದಗಳಿಂದ ಚಾಸಾ 1 ರವರನ್ನು ಬೈದರು. ಏಕಾಏಕಿ ಚಾಸಾ 1 ರವರ ಮೇಲೆ 2 ನೇ ಆರೋಪಿಯು ಕೈಕಾಲುಗಳಿಂದ ಹಲ್ಲೆ ಮಾಡಿದರು. 1 ನೇ ಆರೋಪಿ ಮನೆಯಿಂದ ಕುಡುಗೋಲು ತಂದು ಏಕಾಏಕಿ ಚಾಸಾ 1 ರವರ ತಲೆಯ ಮಧ್ಯಭಾಗಕ್ಕೆ ಹೊಡೆದು ರಕ್ತಗಾಯಪಡಿಸಿದ. ನಾನು , ಚಾಸಾ 2, 4 ಮತ್ತು 5 ರವರು ಜಗಳ ಬಿಡಿಸಿದರು. ಚಾಸಾ 1 ರವರ ತಲೆಯಿಂದ ರಕ್ತ ಬರುತ್ತಿದ್ದರಿಂದ ಚಾಸಾ 1 ರವರನ್ನು ನ್ಯಾಮತಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಹೆಚ್ಚಿನ ಚಿಕಿತ್ಸೆಗೆ 108 ಆ್ಯಂಬುಲೆನ್ಸ್ ನಲ್ಲಿ ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಗೆ ಕರೆದುಕೊಂಡು

ಹೋಗಿರುತ್ತೇವೆ. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು 1 ನೇ ಆರೋಪಿಯನ್ನು ನೋಡಿ ಗುರುತಿಸಿದ್ದು 2 ನೇ ಆರೋಪಿಯು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು 2 ನೇ ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>

ಚಾಸಾ 2 ರವರು ಚಾಸಾ 1 ರವರಿಗೆ ಯಾಕೆ ಬೈಯ್ಯುತ್ತಿದ್ದೀರಾ ಎಂದು 2 ನೇ ಆರೊಪಿಯನ್ನು ಕೇಳುತ್ತಿದ್ದಾಗ 1 ನೇ ಆರೋಪಿ ಚಾಸಾ 2 ರವರನ್ನು ಅವಾಚ್ಯ ಶಬ್ದಗಳಿಂದಬೈದಿರುತ್ತಾರೆ ಎಂದರೆ ಸರಿ. ಆರೋಪಿಗಳು ನನಗೂ ಚಾಸಾ 1 ಮತ್ತು 2 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಜಿ ಎಸ್ ಕೆ ವಕೀಲರಿಂದಃ-</u>

ಎಷ್ಟು ವರ್ಷಗಳಿಂದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು 8 ರಿಂದ 10 ವರ್ಷ ಎಂದು ನುಡಿಯುತ್ತಾರೆ. ನನಗೆ ಭಾನುವಾರಬಿಟ್ಟರೇ ಬೇರೆ ದಿನ ರಜಾ ಸಿಗುವುದಿಲ್ಲ ಎಂದರೆ ಸಾಕ್ಷಿಯು 2020 ರಲ್ಲಿ ಕರೋನಾ ಇದ್ದಿದ್ದರಿಂದ ರಜೆ ಇತ್ತು ಎಂದು ನುಡಿಯುತ್ತಾರೆ. ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ರಜೆ ಇತ್ತು ಎಂದರೆ ಸಾಕ್ಷಿಯು ಮಾರ್ಚ್ ತಿಂಗಳಿನಿಂದ ಜೂನ್ ತಿಂಗಳವರೆಗೆ ಎಂದು ನುಡಿಯುತ್ತಾರೆ. ಮಾರ್ಚ್ ತಿಂಗಳಿನಿಂದ ಜೂನ್ ತಿಂಗಳವರೆಗೆ ನನಗೆ ಯಾವುದೇ ರಜೆ ಇರಲಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೆಕ್ಕೆಜೋಳದ ವಿಚಾರವಾಗಿ ಚಾಸಾ 6 ರವರನ್ನು ಯಾವ ಸಮಯಕ್ಕೆ ಕೇಳಲು ಹೋಗಿರುತ್ತೀರಿ ಎಂದರೆ ಸಾಕ್ಷಿಯು ಸಂಜೆ 7.15 ನಿಮಿಷಕ್ಕೆ ಎಂದು ನುಡಿಯುತ್ತಾರೆ. ಯಾವ ಜಾಗದಲ್ಲಿ ಚಸಾ 6 ರವರನ್ನು ಕೇಳಿರುತ್ತೀರಿ ಎಂದರೆ ಸಾಕ್ಷಿ ಅವರ ಮನೆಯ ಹಿತ್ತಲ ಜಾಗದಲ್ಲಿ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಚಾಸಾ 6 ರವರು ಒಬ್ಬರೇ ಇದ್ದರಾ ಎಂದರೆ ಸಾಕ್ಷಿಯು ಅವರ ಜೊತೆ ಸಂತೋಷ್ ಎಂಬುವವರು ಸಹ ಇದ್ದರು ಎಂದು ನುಡಿಯುತ್ತಾರೆ. ನಮ್ಮ ಮತ್ತು ಚಾಸಾ 6 ರವರ ನಡುಗೆ ಎಷ್ಟು ಸಮಯ ಮಾತುಕತೆ ನಡೆಯಿತು ಎಂದರೆ ಸಾಕ್ಷಿ ಸುಮಾರು 5 ರಿಂದ 10 ನಿಮಿಷ ಎಂದು ನುಡಿಯುತ್ತಾರೆ. ಸದರಿ 5 ರಿಂದ 10 ನಿಮಿಷ ಸಮಯದಲ್ಲಿ ನಮ್ಮ ಮತ್ತು ಚಾಸಾ 6 ರವರ ನಡುಗೆ ಮಾತಿನ ಚಕಮಕಿ, ಗಲಾಟೆ ನಡೆಯಿತು ಎಂದರೆ ಸಾಕ್ಷಿ ಯಾವುದೇ ಗಲಾಟೆ

ಆಗಲಿಲ್ಲ ಕೇವಲ ಕೇಳುತ್ತಿದ್ದೆವು ಅಷ್ಟೇ ಎಂದು ನುಡಿಯುತ್ತಾರೆ. ಚಾಸಾ 6 ರವರು ಮೆಕ್ಕೆಜೋಳ ಹಾಕಿದ್ದ ಜಾಗದಲ್ಲಿ ಯಾರು ಮೆಕ್ಕೆಜೋಳ ಹಾಕಬಾರದು ಎಂದು ಊರಿನ ಗ್ರಾಮಸ್ಥರು ತೀರ್ಮಾನ ಮಾಡಿದ್ದರಿಂದ ಮತ್ತೆ ಚಾಸಾ 6 ರವರು ಘಟನಾ ಸ್ಥಳದಲ್ಲಿ ಮೆಕ್ಕೆಜೋಳ ಹಾಕಿದ್ದನ್ನು ಊರಿನ ಗ್ರಾಮಸ್ಥರಿಗೆ ತಿಳಿಸಿ ಪಂಚಾಯತಿ ಮಾಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಮತುತ ಚಾಸಾ 6 ರವರ ನಡುವೆ ಗಲಾಟೆ ಆಗಿದ್ದು ಚಾಸಾ 6 ರವರು ಆರ್ಥಿಕವಾಗಿ , ರಾಜಕೀಯ ವಾಗಿ ಬಲಿಷ್ಟರಾಗಿದ್ದರಿಂದ ಚಾಸಾ 6 ರವರ ವಿರುದ್ಧ ದೂರು ನೀಡಿದರೆ ನನಗೆ ತೊಂದರೆಯಾಗುತ್ತದೆ ಎಂದು ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮೆಕ್ಕೆಜೋಳ ಹಾಕಲು ಬಿಟ್ಟಿಲ್ಲ ಎಂಬ ದುರುದ್ದೇಶದಿಂದ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

ಚಾಸಾ 1 ರವರು ಮೆಕ್ಕೆಜೋಳದ ವಿಚಾರವಾಗಿ ಚಾಸಾ 6 ರವರನ್ನಾಗಿಲೀ, ಆರೋಪಿಗಳನ್ನಾಗಲೀ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯು ಚಾಸಾ 1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ , ಕೈಕಾಲುಗಳಿಂದ ಹಲ್ಲೆ ಮಾಡಿಲ್ಲ , ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಮು.ಮಾ 1 ರಿಂದ ಚಾಸಾ 1 ರವರ ತಲೆಗೆ ಹೊಡೆದು ಗಾಯಪಡಿಸಿಲ್ಲ ಎಂದರೆ ಸರಿಯಲ್ಲ. ಮು.ಮಾ 1 ರೀತಿಯ ಕುಡುಗೋಲು ನಮ್ಮ ಮನೆಯಲ್ಲಿ ಇದೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ಆರೋಪಿಗಳ ಮನೆಯಲ್ಲೂ ಸಹ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಮನೆಯಲ್ಲಿದ್ದ ಕುಡುಗೋಲನ್ನು ಆರೋಪಿಗೆ ಸೇರಿದ ಜಮೀನಿನಲ್ಲಿ ಇಟ್ಟು ಪೊಲೀಸರಿಗೆ ತೋರಿಸಿರುತ್ತೇನೆ ಎಂದರೆ ಸರಿ ಯಲ್ಲ. ನನಗೆ ವಾಹನ ಚಾಲನಾ ಪರವಾನಗೆ ಇದೆಯಾ ಎಂದರೆ ಸಾಕ್ಷಿ ದ್ವಿಚಕ್ರ ವಾಹನ ಪರವಾನಗೆ ಸುಮಾರು 10 ವರ್ಷಗಳಿಂದ ಇದೆ ಎಂದು ನುಡಿಯುತ್ತಾರೆ. ಹಲ್ಲೆಯ ಹಿನ್ನೆಲೆಯಲ್ಲಿ ಚಾಸಾ 1 ರವರಿಗೆ ಯಾವುದೇ ಗಾಯ ಆಗಿರಲಿಲ್ಲ. ಚಾಸಾ 1 ರವರನ್ನು ಯಾವುದೇ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಮು ಮಾ 1 ಕ್ಕೂ ಆರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ , ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳ ಮನೆಯ ಹಿಂದೆ ಇರುವ ಖಾಲಿ ಜಾಗವನ್ನು ಕಬಳಿಸುವ ಉದ್ದೇಶದಿಂದ ಆರೋಪಿಗಳ ವಿರುದ್ಧ ಸುಳ್ಳು ದೂರನ್ನ ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಹೊನ್ನಾಳಿ.